# 2ನೇ ಮುಂದುವರೆದ ಸುತ್ತಿನ ಯುಜಿ ಆಯುಷ್ ಕೋರ್ಸಿನ ಸೀಟು ಹಂಚಿಕೆ ವೇಳಾ ಪಟ್ಟಿ

ನಿರ್ದೇಶಕರು, ಆಯುಷ್ ನಿರ್ದೇಶನಾಲಯ ಇವರ ಪತ್ರ ಸಂಖ್ಯೆ: ಆಯುಷ್/25/ವೈಶಿ(2)/2018-19 (ಭಾಗ-2) ದಿನಾಂಕ 15-10-2018ರಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು 2ನೇ ಸುತ್ತಿನ ನಂತರ ಉಳಿದ ಆಯುಷ್ ಕೋರ್ಸಿನ ಸೀಟುಗಳಿಗೆ ಮತ್ತೊಂದು ಸುತ್ತಿನ ಹಂಚಿಕೆ ಮಾಡಬೇಕೆಂದು ಕೋರಿರುತ್ತಾರೆ. 2ನೇ ಸುತ್ತಿನ ಸೀಟು ಹಂಚಿಕೆ ನಂತರ ಹಂಚಿಕೆ ಆಗದೆ ಉಳಿದಿರುವ ಮತ್ತು ಯಾವುದೇ ಕಾರಣದಿಂದ ರದ್ದುಗೊಳಿಸಿರುವ ಕಾಲೇಜಿಗೆ ಪ್ರವೇಶ ಪಡೆಯದೆ ಇರುವ ಮತ್ತು ಹೊಸದಾಗಿ ನೀಡಿರುವ ಸೀಟುಗಳನ್ನು ಒಳಗೊಂಡಂತೆ 2ನೇ ಮುಂದುವರೆದ ಸೀಟು ಹಂಚಿಕೆ ನಂತರ ತೀರ್ಮಾನಿಸಲಾಗಿದೆ. ಅದರಂತೆ ಈ ಕೆಳಗಿನಂತೆ ಸೂಚನೆ ನೀಡಿರುತ್ತದೆ.

ಈ ಕೆಳಗಿನಂತೆ ವಿದ್ಯಾರ್ಥಿಗಳು 2ನೇ ಸುತ್ತಿನ ಮುಂದುವರೆದ ಸೀಟು ಹಂಚಿಕೆಯಲ್ಲಿ ಭಾಗವಹಿಸಲು ಅರ್ಹರಿರುವುದಿಲ್ಲ.

1) ಪರೀಕ್ಷಾ ಪ್ರಾಧಿಕಾರವು ನಡೆಸಿದ (ಮೆಡಿಕಲ್/ಪಶುವೈದ್ಯಕೀಯ) ಕೋರ್ಸುಗಳಿಗೆ ಸೀಟು ಹಂಚಿಕೆಗೆ ಈಗಾಗಲೇ ಪ್ರವೇಶ ಪಡೆದವರು.
2) ಆಯುಷ ಕೋರ್ಸಿನ ಮೊದಲ ಸುತ್ತಿನಲ್ಲಿ ಯಾವುದೇ ಚಾಯ್ಸ್ ನೀಡದಿದ್ದಲ್ಲಿ,
3) ಆಯುಷ್ ಕೋರ್ಸಿನ ಎರಡನೇ ಸುತ್ತಿನಲ್ಲಿ ಸೀಟು ಹಂಚಿಕೆಯಾಗಿ ಪ್ರವೇಶ ಪಡೆದಿದ್ದಲ್ಲಿ ಆರ್ಹರಿರುವುದಿಲ್ಲ,

ಪ್ರಾಧಿಕಾರದ ಮುಖಾಂತರ ಸೀಟನ್ನು ಹಂಚಿಕೆ ಮಾಡಿಕೊಂಡು ಈಗಾಗಲೇ ಕಾಲೇಜುಗಳಲ್ಲಿ ಪ್ರವೇಶ ಪಡೆದಿರುವ ಅಭ್ಯರ್ಥಿಗಳು ಪೋಷಕರೊಡನೆ ಚರ್ಚಿಸಿ, ಆಯುಷ್ ಕೋರ್ಸುಗಳಿಗೆ ಆಸಕ್ತಿ ಇದ್ದರೆ ಮತ್ತು ನಿಗದಿತ ದಿನಾಂಕದೊಳಗೆ ಮೂಲ ದಾಖಲಾತಿಗಳನ್ನು ತಾವು ಅಭ್ಯಸಿಸುತ್ತಿರುವ ಕಾಲೇಜುಗಳಿಂದ ಪಡೆಯುವುದನ್ನು ಖಾತ್ರಿಪಡಿಸಿಕೊಂಡು ನಂತರ ಈ ಸುತ್ತಿನಲ್ಲಿ ಭಾಗವಹಿಸಲು ಸೂಚಿಸಿದೆ.

ಈ ಮೇಲಿನ ವರ್ಗದ ಅಭ್ಯರ್ಥಿಗಳನ್ನು ಬಿಟ್ಟು ಉಳಿದ ಎಲ್ಲಾ ಅಭ್ಯರ್ಥಿಗಳು 2ನೇ ಮುಂದುವರೆದ ಸುತ್ತಿನಲ್ಲಿ ಭಾಗವಹಿಸಬಹುದಾಗಿದೆ.

**ವಿಶೇಷ ಸೂಚನೆ: – 2ನೇ ಮುಂದುವರೆದ ಸುತ್ತಿನ ಹಂಚಿಕೆಯ ನಂತರ ಸೀಟುಗಳು ಉಳಿದಲ್ಲಿ ಸರ್ಕಾರಿ ಕೋಟಾದ ಸೀಟುಗಳಿಗೆ ಮಾತ್ರ Mop up round ನಡೆಸಲಾಗುವುದು.**

**ಎರಡನೇ ಮುಂದುವರೆದ ಸುತ್ತಿನ ಸೀಟು ಹಂಚಿಕೆ ಹಾಗೂ ತದನಂತರದಲ್ಲಿ ನಡೆಸಲಾಗುವ Mop up round ಸುತ್ತಿನ ಸೀಟು ಹಂಚಿಕೆಯಲ್ಲಿ ಭಾಗವಹಿಸಲು ಆಸಕ್ತಿ ಹೊಂದಿರುವ ಅಭ್ಯರ್ಥಿಗಳು ಇದುವರೆಗೆ ಆಯುಷ್ ಕೋರ್ಸ್‌ಗಳಿಗೆ ಆನ್‌ಲೈನ್ ಮುಖಾಂತರ ನೊಂದಣಿ ಮಾಡದೇ ಇದ್ದಲ್ಲಿ ಈಗ ಕಡ್ಡಾಯವಾಗಿ ಆನ್‌ಲೈನ್ ಮುಖಾಂತರ ಅರ್ಜಿಯನ್ನು ನೊಂದಾಯಿಸಲು ಸೂಚಿಸಲಾಗಿದೆ.**

ಆಡಳಿತಾಧಿಕಾರಿ